ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ನಾನು ಉತ್ತರ ಕೊಡುತ್ತೇನೆ, ಈಗ ಸಸಿಗಳನ್ನು ನೆಡುತ್ತಿರುವುದು ನಿಜ. ತಮಗೆ ಖಚಿತವಾದ ಉತ್ತರ ಬೇಕೆಂದರೆ ಇನ್ನೊಂದು ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ. ಯಾವ್ಯಾವ ಸಸಿಗಳನ್ನು ನೆಡುತ್ತಿದ್ದೀರಿ ಎಂಬ ಬಗ್ಗೆ ಪ್ರತ್ಯೇಕವಾಗಿ ಕೇಳಿ.

ಡಾ॥ ಎಂ.ಪಿ.ಕರ್ಕಿ:- ಟ್ರಿ ಗಾರ್ಡ್ ಕೊಡುವುದನ್ನು ನಿಲ್ಲಿಸಿದ್ದಾರೆ. ಅದನ್ನು ಕೊಡುತ್ತಾರೋ ಹೇಗೆ ಎಂದು ವಿವರ ಬೇಕು. ಈ ಪ್ರಶ್ನೆ ಕೇಳಿದ ಉದ್ದೇಶವೇನೆಂದರೆ, ಅನೇಕ ಸಸಿಗಳು ಇವೆ. ನಮ್ಮಲ್ಲಿ ಹಾಕತಕ್ಕಂಥಾದ್ದು ಅಕೇಶಿಯಾ ಮಾತ್ರ. ಒಳ್ಳೆ ಜಮೀನಿನಲ್ಲೂ ಕೂಡ ಅಕೇಶಿಯಾ ಹಾಕುತ್ತಾರೆ. ಅದಕ್ಕಾಗಿಯೇ ಎಷ್ಟು ಪರ್ಸಂಟೇಜ್ ಯಾವ್ಯಾವುದನ್ನು ಹಾಕುತ್ತಿದ್ದೀರಿ ಎಂದು ಕೇಳಿದ್ದುದು. 99 ಪರ್ಸೆಂಟ್ ಅಕೇಶಿಯಾ 1 ಅಥವಾ 2 ಪರ್ಸೆಂಟ್ ಕ್ಯಾಸರಿನ. ಅದನ್ನು ಬಿಟ್ಟರೆ ಬೇರೆ ಯಾವ ಸಸಿಗಳನ್ನೂ ನೆಡುತ್ತಿಲ್ಲ. ಅಲ್ಲಿಂದ ಇಲ್ಲಿತನಕ ಅಕೇಶಿಯಾನೇ. ಇಲ್ಲಿ ಇಷ್ಟೆಲ್ಲಾ ತೇಗ, ಮತ್ತಿ, ನಂದಿ, ಕಿನ್ನಾಳ, ಬೊಂಬು ಎಂದು ಬರೆದುಬಿಟ್ಟಿದ್ದಾರೆ. ಅದಕ್ಕೆ ನಾನು ತಮ್ಮಲ್ಲಿ ಕೇಳುತ್ತಿರುವುದು. ಪರ್ಸಂಟೇಜ್ ಯಾವ ರೀತಿ ಮಾಡುತ್ತಿದ್ದೀರಿ ಎಂದು ನಾನು ಕೇಳುತ್ತಿರುವುದು. ಜನರಿಗೆ ಉಪಯೋಗವಾಗತಕ್ಕಂತಹ ಸಸಿಗಳು ಇವೆ ಅದನ್ನು ನೆಡುತ್ತೀರೋ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಅಕೇಶಿಯಾ ನೀಲಗಿರಿ ಸಸಿಗಳನ್ನು ಏಕೆ ಹೆಚ್ಚು ಹಾಕುತ್ತಿದ್ದೇವೆಂದರೆ ಉರುವಲು ಕಟ್ಟಿಗೆಯಿಂದಾಗಿ ಅರಣ್ಯದ ಮೇಲೆ ಹೆಚ್ಚು ಒತ್ತಡ ಬರುತ್ತಿದೆ. ಜನರಿಗೆ ಅನುಕೂಲವಾಗಲೀ ಎಂದು ಇದನ್ನು ನೆಡುತ್ತಿದ್ದೇವೆ.

ಅಧ್ಯಕ್ಷರು:- ಅದು ಕನ್ವಿನ್ಸಿಂಗ್ ಉತ್ತರ ಅಲ್ಲ. ಬೇರೆ ಸ್ಪೀಷೀಸ್ ಹಾಕಬೇಕು. ಅಕೇಶಿಯಾ ಯೂಕಲಿಪ್ಟಸ್ ಬದಲಿಗೆ ಅವಶ್ಯಕತೆಯ ಕಡೆಗೆ ಗಮನ ಕೊಡಬೇಕು. ಜನ ಬಾಯಿ ಇಲ್ಲದವರು ನಿಮ್ಮ ಹತ್ತಿರ ಅವರೇನು ಬೇಡಿಕೆ ಮಾಡುತ್ತಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಹಣ್ಣು ಹಂಪಲು ಗಿಡಗಳನ್ನೂ ಹಾಕುವುದಕ್ಕೆ ನಾವು ತಯಾರಿದ್ದೇವೆ. ಅದನ್ನು ಮಾಡುತ್ತೇವೆ. ಬೇವು ಹುಣಸೇ ಇಂತಹವುಗಳನ್ನು ನೆಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ವಿಷಯ:- ವೈದ್ಯಕೀಯ ಶಿಕ್ಷಣದಲ್ಲಿರುವ ಕ್ಯಾಪಿಟೇಶನ್ ಶುಲ್ಕ ತಡೆಯಲು ಕ್ರಮ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 133 (1165)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ವೈದ್ಯಕೀಯ ಶಿಕ್ಷಣಕ್ಕೆ ಮಾರಕವಾಗುತ್ತಿರುವ ಕ್ಯಾಪಿಟೇಷನ್ ಪಿಡುಗನ್ನು ತಪ್ಪಿಸಲು ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಇರುವ ತೊಂದರೆ ಏನು?

2) ವೈದ್ಯಕೀಯ ಕಾಲೇಜುಗಳನ್ನು ಸರ್ಕಾರವೇ ವಹಿಸಿಕೊಂಡು ನಡೆಸಲು ಕ್ರಮ

ಕೈಗೊಳ್ಳುವರೇ?

3. ರಾಜ್ಯದಲ್ಲಿರುವ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು? ಇವುಗಳನ್ನು ಯಾರ್ಯಾರು ನಡೆಸುತ್ತಿದ್ದಾರೆ ವಿವರ ನೀಡುವುದು.

ಡಾ॥ ಎಂ.ಶಂಕರನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು):-

1) 1984ರಲ್ಲಿ ಕರ್ನಾಟಕ ಸರ್ಕಾರವು ಕ್ಯಾಪಿಟೇಶನ್ ಫೀ ರದ್ದು ಮಾಡುವ ಕಾಯ್ದೆಯನ್ನು ಜಾರಿಗೆ ತಂದಿರುತ್ತದೆ. 1993ರಿಂದ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ವೃತ್ತಿ ಪರ ಕಾಲೇಜುಗಳಲ್ಲಿ ಶೇಕಡ 50ನ್ನು ಉಚಿತ ಸೀಟುಗಳಾಗಿಯೂ, ಶೇಕಡ 35ನ್ನು ಪಾವತಿ ಸೀಟುಗಳಾಗಿಯೂ, ಮತ್ತು ಶೇಕಡ 15ನ್ನು ಆಡಳಿತ ಸೀಟುಗಳಾಗಿಯೂ ವರ್ಗೀಕರಣ ಮಾಡಲಾಗಿದೆ. ಆದ್ದರಿಂದ ಕ್ಯಾಪಿಟೇಶನ್ ಫೀ ಅನ್ನು ವಸೂಲಿ ಮಾಡಿರುವುದಿಲ್ಲ. ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಬೋಧನಾ ಶುಲ್ಕವನ್ನು ನಿಗದಿಗೊಳಿಸಲಾಗಿದೆ.

2) ಪ್ರಸ್ತುತ ಇಂತಹ ಪ್ರಸ್ತಾವನೆ ಸರ್ಕಾರದಲ್ಲಿ ಇಲ್ಲ.

3) ರಾಜ್ಯದಲ್ಲಿ ಒಟ್ಟು 19 ವೈದ್ಯಕೀಯ ಕಾಲೇಜುಗಳಿವೆ. ವಿವರದ ಪಟ್ಟಿ ಪ್ರತ್ಯೇಕವಾಗಿ ಲಗತ್ತಿಸಲಾಗಿದೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1165ಕ್ಕೆ ಅನುಬಂಧ

ರಾಜ್ಯದಲ್ಲಿರುವ ವೈದ್ಯಕೀಯ ಕಾಲೇಜುಗಳು ಮತ್ತು ಅದನ್ನು ನಡೆಸುತ್ತಿರುವವರ ವಿವರಗಳು.

ಅನುಬಂಧ

1.	ಡಾ:ಬಿ.ಆರ್.ಅಂಬೇಡ್ಕರ್ ವೈದ್ಯಕೀಯ ಕಾಲೇಜು, ಬೆಂಗಳೂರು	ಅಂಬೇಡ್ಕರ್ ಎಜುಕೇಷನ್ ಟ್ರಸ್ಟ್.
2.	ಕೆಂಪೇಗೌಡ ಇನ್ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಬೆಂಗಳೂರು.	ಒಕ್ಕಲಿಗರ ಸಂಘ, ಬೆಂಗಳೂರು.
3.	ಎಂ.ಎಸ್.ರಾಮಯ್ಯ ಮೆಡಿಕಲ್ ಕಾಲೇಜು, ಬೆಂಗಳೂರು.	ಗೋಕುಲ ಎಜುಕೇಷನ್ ಫೌಂಡೇಷನ್ ಟ್ರಸ್ಟ್, ಬೆಂಗಳೂರು.
4.	ಸೆಂಟ್ ಜಾನ್ ಮೆಡಿಕಲ್ ಕಾಲೇಜು, ಬೆಂಗಳೂರು.	ಸಿ.ಬಿ.ಸಿ.ಐ. ಸೊಸೈಟಿ ಫಾರ್ ಮೆಡಿಕಲ್ ಎಜುಕೇಷನ್, ಬೆಂಗಳೂರು.

5. ಜೆ.ಎಸ್.ಎಸ್.ವೈದ್ಯಕೀಯ ಕಾಲೇಜು, ಮೈಸೂರು.	ಶ್ರೀ ಜಗದ್ಗುರು ಶಿವರಾತ್ರೇಶ್ವರ ಮಹಾವಿದ್ಯಾಪೀಠ, ಮೈಸೂರು.
6. ಆದಿ ಚುಂಚನಗಿರಿ ಇನ್ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಬೆಳ್ಳೂರು, ಮಂಡ್ಯ ಜಿಲ್ಲೆ.	ಆದಿ ಚುಂಚನಗಿರಿ ಶಿಕ್ಷಣ ಟ್ರಸ್ಟ್.
7. ಸಿದ್ಧಾರ್ಥ ಮೆಡಿಕಲ್ ಕಾಲೇಜು, ತುಮಕೂರು.	ಸಿದ್ಧಾರ್ಥ ಎಜುಕೇಷನ್ ಟ್ರಸ್ಟ್, ತುಮಕೂರು.
8. ದೇವರಾಜ್ ಅರಸ್ ಮೆಡಿಕಲ್ ಕಾಲೇಜ್, ಕೋಲಾರ.	ದೇವರಾಜ ಅರಸ್ ಎಜುಕೇಷನ್ ಟ್ರಸ್ಟ್, ಕೋಲಾರ.
9. ಎಂ.ಆರ್.ಮೆಡಿಕಲ್ ಕಾಲೇಜು, ಗುಲ್ಬರ್ಗ	ಹೈದ್ರಾಬಾದ್ ಕರ್ನಾಟಕ ಎಜುಕೇಷನ್ ಸೊಸೈಟಿ
10. ಜೆ.ಎನ್.ಎಂ.ಸಿ., ಬೆಳಗಾಂ.	ಕರ್ನಾಟಕ ಲಿಂಗಾಯಿತ್ ಎಜುಕೇಷನ್ ಸೊಸೈಟಿ, ಬೆಳಗಾಂ.
11. ಜೆ.ಜೆ.ಎಂ.ಸಿ. ದಾವಣಗೆರೆ.	ಬಾಪೂಜಿ ಎಜುಕೇಷನ್ ಟ್ರಸ್ಟ್, ದಾವಣಗೆರೆ.
12. ಕೆ.ಎಂ.ಸಿ. ಮಂಗಳೂರು.	ಟಿ.ಎಂ.ಎ. ಫೌಂಡೇಷನ್ ಟ್ರಸ್ಟ್, ದಾವಣಗೆರೆ.
13. ಕಸ್ತೂರಬಾ ಮೆಡಿಕಲ್ ಕಾಲೇಜ್, ಮಣಿಪಾಲ್.	-''-
14. ಬಿ.ಎಲ್.ಡಿ.ಇ. ಬಿಜಾಪುರ.	ಬಿ.ಎಲ್.ಡಿ.ಇ. ಅಸೋಸಿಯೇಷನ್, ಬಿಜಾಪುರ.
15. ಆಲ್ ಅಮೀನ್ ಮೆಡಿಕಲ್ ಕಾಲೇಜ್, ಬಿಜಾಪುರ.	ಆಲ್ ಅಮೀನ್ ಎಜುಕೇಷನ್ ಟ್ರಸ್ಟ್, ಬೆಂಗಳೂರು.

16. ಸರ್ಕಾರಿ ವೈದ್ಯಕೀಯ ಕರ್ನಾಟಕ ರಾಜ್ಯ ಸರ್ಕಾರ
ಮಹಾವಿದ್ಯಾಲಯ ಬೆಂಗಳೂರು.

17. ಕರ್ನಾಟಕ ವೈದ್ಯಕೀಯ -''-
ಮಹಾವಿದ್ಯಾಲಯ ಹುಬ್ಬಳ್ಳಿ.

18. ಸರ್ಕಾರಿ ವೈದ್ಯಕೀಯ -''-
ಮಹಾವಿದ್ಯಾಲಯ, ಮೈಸೂರು.

19. ಸರ್ಕಾರಿ ವೈದ್ಯಕೀಯ -''-
ಮಹಾವಿದ್ಯಾಲಯ, ಬಳ್ಳಾರಿ.

ಡಾ. ಎಂ.ಶಂಕರನಾಯಕ್:- ಮಾನ್ಯ ಅಧ್ಯಕ್ಷರೇ, ಅವರ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಮುಂಚೆ ಇವತ್ತು ನನ್ನ ಇಲಾಖೆಗೆ ಸಂಬಂಧಪಟ್ಟಂತೆ ಹೈಕೋರ್ಟಿನಲ್ಲಿ ಒಂದು ಕೇಸ್ ಇತ್ತು.

ಅಧ್ಯಕ್ಷರು:- ನಿಮ್ಮ ಕೇಸ್ ಗೀಸ್ ಅವೆಲ್ಲ ನನಗೆ ಸಂಬಂಧ ಇಲ್ಲ. ಅಜೆಂಡವನ್ನು ನೋಡಿಕೊಳ್ಳಬೇಕು. ಮೊದಲನೇ ಪ್ರಶ್ನೆ, ನಿಮ್ಮದು ಇದೆ. ನಿಮಗೇನಾದರೂ ತೊಂದರೆ ಇದ್ದರೆ ಬೇರೆಯವರಿಗೆ ಜವಾಬ್ದಾರಿ ವಹಿಸಬೇಕು. ಇಲ್ಲವೇ ನಿಮ್ಮ ಪ್ರೈವೇಟ್ ಸೆಕ್ರೆಟರಿಯವರು ತೊಂದರೆ ಇದೆ ಎಂದು ನನಗೆ ಹೇಳಿದ್ದರೆ, ನಾನು ನಂತರ ಕರೆಯುತ್ತೇನೆಂದು ಹೇಳುತ್ತಿದ್ದೆ.

ಡಾ. ಎಂ.ಶಂಕರನಾಯಕ್:- ಇಲ್ಲಿ ತಪ್ಪಾಗಿ ಅಚ್ಚಾಗಿದೆ ಆರೋಗ್ಯ ಮತ್ತು ಕುಟುಂಬ ಇಲಾಖೆ ಸಚಿವರು ಎಂದು ಇದರಲ್ಲಿ ಅಚ್ಚಾಗಿದೆ.

ಶ್ರೀ ವಾಟಾಳ್ ನಾಗರಾಜ್:- ಇದರಲ್ಲಿ ನಾವು ಕ್ಯಾಪಿಟೇಷನ್ ಶುಲ್ಕ ವಸೂಲು ಮಾಡುತ್ತಿಲ್ಲವೆಂದು ಹೇಳಿದ್ದಾರೆ. ಇದು ಎಲ್ಲರಿಗೂ ನಗ್ನ ಸತ್ಯ ಕ್ಯಾಪಿಟೇಷನ್ ಶುಲ್ಕ ವಸೂಲು ಮಾಡುತ್ತಾರೆ ಅದರಲ್ಲೇನೂ ಅನುಮಾನ ಇಲ್ಲ. ಇಲ್ಲಿ ಬಹಿರಂಗವಾಗಿ ನಾವು ವಸೂಲು ಮಾಡುತ್ತಿಲ್ಲವೆಂದು ತಾವು ಹೇಳಿದ್ದೀರಿ. ತಾವು ಸ್ವಲ್ಪ ಪ್ರಾಮಾಣಿಕವಾಗಿ ನಿಮ್ಮ ಅಂತರಾಳಕ್ಕೆ ಕೈಯಿಟ್ಟು ಹೇಳಿ. ನಿಜ ಹೇಳುತ್ತಿದ್ದೀರೋ ನೀವು. ಈ ಸದನದಲ್ಲಿ ಹೇಳಬೇಕಾದರೆ ಪ್ರಾಮಾಣಿಕತೆಯಿಂದ ಹೇಳಿ. 19 ಕಾಲೇಜಿಗಳಲ್ಲಿ ಎಷ್ಟು ಕಾಲೇಜನವರು ಈರೀತಿಯಾದಂಥ ಕ್ಯಾಪಿಟೇಷನ್ ಶುಲ್ಕವನ್ನು ವಸೂಲು ಮಾಡುತ್ತಿದ್ದಾರೆ. ಒಬ್ಬ ವ್ಯಕ್ತಿಯಿಂದ 30 ಲಕ್ಷ ರೂಪಾಯಿ, ಒಂದಲ್ಲ, ಎರಡಲ್ಲ, ಯಾವ ಬಡವರು, ಬಡವರ ಮಕ್ಕಳು ಓದುವುದಕ್ಕಾಗುತ್ತಿಲ್ಲ. ಕರ್ನಾಟಕದ ಮಕ್ಕಳು ಓದುವುದಕ್ಕೆ ಆಗುತ್ತಿಲ್ಲ. ಕನ್ನಡದ ಮಕ್ಕಳು ಓದುವುದಕ್ಕೆ ಆಗುತ್ತಿಲ್ಲ. ಇವು ಹೊರಗಡೆಯವರನ್ನು ತಯಾರು ಮಾಡುವ ಕೈಗಾರಿಕೆಗಳಾಗಿವೆಯೇ ಹೊರತು....

ಅಧ್ಯಕ್ಷರು:- ಸಚಿವರ ಉತ್ತರವನ್ನು ದಯಮಾಡಿ ಓದಿಕೊಳ್ಳಿ. 50 ಪರ್‌ಸೆಂಟ್ ಉಚಿತ ಸೀಟು ಇನ್ನು 35 ಪರ್‌ಸೆಂಟ್ ಪಾವತಿ ಸೀಟು, ಇನ್ನು 15 ಪರ್‌ಸೆಂಟ್ ಆಡಳಿತ ಮಂಡಳಿಗೆ ಕೊಟ್ಟಿದ್ದಾರೆ. ಈ 50 ಪರ್ಸೆಂಟಿನಲ್ಲಿ ಬರುವವರೆಲ್ಲಾ ಕನ್ನಡದ ಮಕ್ಕಳು ಇವರೇ ಬರುವುದು. ತಾವು ಪೂರ್ಣ ಓದಿ.

ಶ್ರೀ ವಾಟಾಳ್ ನಾಗರಾಜ್:- ನಾನು ಪೂರ್ಣ ನಾಲ್ಕು ನಾಲ್ಕು ಸಾರಿ ಓದಿದ್ದೇನೆ. 15 ಪರ್‌ಸೆಂಟ್ ಏನು ಇದೆ, ಅದು ಕ್ಯಾಪಿಟೇಷನ್ ಎಷ್ಟು ವಸೂಲು ಮಾಡಬೇಕು ಎಂದು ಇರುತ್ತದಲ್ಲಾ, ನಾನು ಓದಿಕೊಂಡು ಬಂದೇ ಮಾತನಾಡುತ್ತಿದ್ದೇನೆ.

ಅಧ್ಯಕ್ಷರು:- ಖಚಿತವಾದ ಮಾಹಿತಿ ಇದ್ದರೆ ಇಂಥ ಸಂಸ್ಥೆಯವರು ಇಷ್ಟು ತೆಗೆದುಕೊಂಡಿದ್ದಾರೆ. ಇದು ಕಾನೂನು ಬಾಹಿರ ಎಂದು ಕೊಟ್ಟರೆ ತಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳೋಣ.

ಶ್ರೀ ವಾಟಾಳ್ ನಾಗರಾಜ್:- ಅದಲ್ಲ ಸ್ವಾಮಿ, ಖಚಿತವಾಗಿಯಲ್ಲ, ಧಾರಾಳವಾಗಿ ಎಲ್ಲಾ ಕಾಲೇಜಿನಲ್ಲಿ ನಡೆಯುತ್ತಿದೆ. ಖಚಿತವಾಗಿ ಎಂದು ಏನು ಹೇಳಲಿ. ಎಲ್ಲಾ ಕಾಲೇಜುಗಳಲ್ಲಿ ನಡೆಯುತ್ತಿದೆ. ಅಂದರೆ 30 ಲಕ್ಷ ರೂಪಾಯಿ, ತಾವು ಆ ರೀತಿ ಹೇಳಿಬಿಟ್ಟರೆ ಹೇಗೆ? ನಾವು ಏನು ಮಾಡುವುದಕ್ಕಾಗುತ್ತದೆ?

ಅಧ್ಯಕ್ಷರು:- ತಾವು ಹೇಳಿ.

ಶ್ರೀ ವಾಟಾಳ್ ನಾಗರಾಜ್:- ಈ ಪಿಡುಗನ್ನು ನಿಲ್ಲಿಸುವುದಕ್ಕೆ ಸರ್ಕಾರ ತೀವ್ರವಾದ ಕ್ರಮವನ್ನು ಕೈಗೊಳ್ಳಬೇಕೆಂದು ನನ್ನ ಉದ್ದೇಶವೇ ಹೊರತು ಇದರಲ್ಲಿ ನಮ್ಮದೇನೂ ಇದೆ?

ಅಧ್ಯಕ್ಷರು:- ಮಂತ್ರಿಗಳು ಏನು ಹೇಳುತ್ತಾರೆ ಕೇಳೋಣ. ಆಮೇಲೆ ಮತ್ತೆ ಕೇಳಿ.

ಡಾ. ಎಂ.ಶಂಕರನಾಯಕ್ (ವೈದ್ಯಕೀಯ ಸಚಿವರು):- ಮಾನ್ಯ ಅಧ್ಯಕ್ಷರೇ, ನಾವು ಏನು ಉತ್ತರವಲ್ಲಿ ಕೊಟ್ಟಿದ್ದೇವೆ, ಇದು ಕ್ಯಾಪಿಟೇಷನ್ ಎಂದು ಶುಲ್ಕ ಎಂದು ವಸೂಲಿ ಇಲ್ಲ. ಸರ್ವೋಚ್ಚ ನ್ಯಾಯಾಲಯ ಏನು ಫಿಕ್ಸ್ ಮಾಡಿದೆ ಬೋಧಕ ಶುಲ್ಕ, ಟ್ಯೂಷನ್ ಫೀ ಎಂದು ಹೇಳಿ ಅದರ ಪ್ರಕಾರ 15 ಪರ್‌ಸೆಂಟೇನೊ ಪ್ರೈವೇಟ್ ಮ್ಯಾನೇಜ್‌ಮೆಂಟ್‌ಗೆ ಬರುತ್ತವೆ. ಸೀಟ್‌ನಲ್ಲಿ ಅದು ಎನ್‌ಆರ್‌ಐ ಸೀಟೆಂದು ಅವರಿಗೆ ಕೊಟ್ಟರುವುದು. ಅದರಲ್ಲಿ 70 ಸಾವಿರ ಅಮೇರಿಕನ್ ಡಾಲರ್‌ನ್ನು ಬೋಧಕ ಶುಲ್ಕವಾಗಿ ವಸೂಲಿ ಮಾಡಬೇಕೆಂದು ಸರ್ವೋಚ್ಚ ನ್ಯಾಯಾಲಯ ಕೊಟ್ಟರುವ ಆದೇಶದ ಮೇಲೆ ಅವರು ತೆಗೆದುಕೊಳ್ಳುತ್ತಿದ್ದಾರೆ. ತಾವು ಬಡಮಕ್ಕಳಿಗೆ ಸೀಟು ಸಿಗುತ್ತಿಲ್ಲ ಎಂದು ಹೇಳಿದಿರಿ. 19 ಕಾಲೇಜುಗಳಲ್ಲಿ 4 ಕಾಲೇಜುಗಳು ಸರ್ಕಾರಿ ಕಾಲೇಜುಗಳು. ಪೂರ್ತಿ ಬಡಮಕ್ಕಳಿಗೆ ಕೊಡುವುದು, ಮೆರಿಟ್ ಮೇಲೆ ಕೊಡುವುದು. ಬಾಕಿ 15 ಕಾಲೇಜುಗಳಲ್ಲಿ ಶೇಕಡ 50ರಷ್ಟು ಬಡವರಿಗೆ ಅದು ಮೆರಿಟ್ ಆಧಾರದ ಮೇಲೆ ಕೊಡುವುದು, ಸಿಇಟಿಯಿಂದ

ಅಲಾಟ್ ಆಗುವ ಸೀಟುಗಳು. ಮತ್ತು 20 ಪರ್‌ಸೆಂಟ್ ಪೇಮೆಂಟ್ ಸೀಟು. ಅಂದರೆ ಒಂದೊಂದು ಹಾಸ್ಪಿಟಲ್ ಅಟ್ಯಾಚ್ ಇರುವ ಕಾಲೇಜುಗಳಿಗೆ 70 ಸಾವಿರದಿಂದ 1 ಲಕ್ಷ ರೂಪಾಯಿಯವರೆಗೆ ಒಂದು ವರ್ಷಕ್ಕೆ ಫೀಜ್ ಕೊಡುವ ಪೇಮೆಂಟ್ ಸೀಟುಗಳನ್ನು, 20 ಪರ್‌ಸೆಂಟ್ ಅದು ಕರ್ನಾಟಕದ ವಿದ್ಯಾರ್ಥಿಗಳಿಗೆ ಕೊಡುವುದು. ಬಾಕಿ ಇನ್ನು 15 ಪರ್‌ಸೆಂಟ್, ಅದು ಇನ್ನು ಸರ್ವೋಚ್ಚ ನ್ಯಾಯಾಲಯದಲ್ಲಿದೆ. ಅದು ನಾನ್ ಕರ್ನಾಟಕ ಸ್ಟೂಡೆಂಟ್ಸ್ ಎಂದು ಹೇಳಿ, ಅದರ್ ದ್ಯಾನ್ ಕರ್ನಾಟಕ ಸ್ಟೂಡೆಂಟ್ ಆಫ್ ಇಂಡಿಯಾ ಕೋಟಾದಲ್ಲಿ ಕೊಡುವುದು. ಇನ್ನು 15 ಪರ್‌ಸೆಂಟ್ ಏನು ಸರ್ವೋಚ್ಚ ನ್ಯಾಯಾಲಯ ಹೇಳಿದೆ, ಅದು ಎನ್‌ಆರ್‌ಐ ಸೀಟು ಎಂತಲೇ. ತಾವು ಹೇಳುವುದು 24ರಿಂದ 30 ಲಕ್ಷ ರೂಪಾಯಿ ತೆಗೆದುಕೊಳ್ಳುವುದು ನಿಜ, ಆದರೆ ಅದನ್ನು ಸರ್ವೋಚ್ಚ ನ್ಯಾಯಾಲಯವೇ ಫಿಕ್ಸ್ ಮಾಡಿದೆ. ಇಷ್ಟೇ ಫೀಜು ತೆಗೆದುಕೊಳ್ಳಬೇಕೆಂದು. ಆ ಪ್ರಕಾರ ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರು ಎನ್‌ಆರ್‌ಐ ಸೀಟ್‌ನಲ್ಲಿ ತೆಗೆದುಕೊಳ್ಳುತ್ತಿದ್ದಾರೆಯೇ ಹೊರತು, ಅದು 15 ಪರ್‌ಸೆಂಟ್ ಬಿಟ್ಟು ಬಾಕಿ ಯಾವುದು ಒಂದು ಸೀಟನ್ನು ಪ್ರೈವೇಟ್ ಮ್ಯಾನೇಜ್‌ಮೆಂಟ್‌ನಲ್ಲಿ ಕೊಡಲಿಕ್ಕೆ ಅವಕಾಶ ಇಲ್ಲ. ಅವರು ಯಾರೂ ಹೋಗುವುದೂ ಇಲ್ಲ. ಎನ್‌ಆರ್‌ಐ ಅಥವಾ ಯಾರಾದರೂ ಇಲ್ಲದಿದ್ದರೆ, ನಮ್ಮ ದೇಶದವರು ದುಡ್ಡು ಕೊಟ್ಟರೆ ನಮ್ಮ ರಾಜ್ಯದವರು ದುಡ್ಡು ಕೊಟ್ಟು ತೆಗೆದುಕೊಂಡರೆ ನಾವು ಏನು ಅಡ್ಡಿ ಮಾಡುವುದಿಲ್ಲ. ನೀವಾಗಲಿ ನಾವಾಗಲೀ ಕಾನೂನಾಗಲಿ ಅಡ್ಡಿ ಬರುವುದಿಲ್ಲ. ಆ ರೀತಿಯಲ್ಲಿ ಸರ್ವೋಚ್ಚ ನ್ಯಾಯಾಲಯದ ಒಂದು ಆದೇಶದ ಮೇರೆಗೆ ಈ ಅಡ್ಮಿಷನ್ಸ್ ಎಲ್ಲಾ ನಡೆಯುತ್ತಿದೆ.

ಅಧ್ಯಕ್ಷರು:- ವಾಟಾಳ್ ನಾಗರಾಜ್‌ರವರೇ, ತಾವು ಈಗ ಮತ್ತೆ ಕೇಳಿ.

ಶ್ರೀ ವಾಟಾಳ್ ನಾಗರಾಜ್:- ಮತ್ತೆ ಎಷ್ಟು ಕಾಲೇಜುಗಳಿಗೆ ಸರ್ಕಾರ ಅನುಮತಿ ಕೊಡಬೇಕೆಂದು ಮಾಡಿದ್ದೀರಿ?

ಡಾ. ಎಂ.ಶಂಕರನಾಯಕ್:- ಸಧ್ಯಕ್ಕೆ ಸರ್ಕಾರದ ಮುಂದೆ ಆ ಪ್ರಸ್ತಾಪ ಇಲ್ಲ.

ಅಧ್ಯಕ್ಷರು:- ಇನ್ನೇನಾದರೂ ಕೇಳುತ್ತೀರಾ ತಾವು.

ಶ್ರೀ ವಾಟಾಳ್ ನಾಗರಾಜ್:- ಆಯಿತು ಸ್ವಾಮಿ.

ಅಧ್ಯಕ್ಷರು:- ನಾನು ಸಿಟ್ಟಿಗೆದ್ದಿಲ್ಲ. ನೀವು ಕೇಳುವುದು ಇದ್ದರೆ ಕೇಳಿ. ನಾನು ಈ ವಿಚಾರದಲ್ಲಿ ಇನ್ನೂ ಟೈಮ್ ಕೊಡುತ್ತೇನೆ. ನೀವು ಪ್ರಶ್ನೆ ಕೇಳಿ. ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ ದಯಮಾಡಿ ಆ ರೀತಿ ಅಭಿಪ್ರಾಯ ಬರುವುದು ಬೇಡ. ಇದು ಖಾಸಗಿ ಮೆಡಿಕಲ್ ಕಾಲೇಜುಗಳಿಗೆ ಸಂಬಂಧಿಸಿದ ವಿಚಾರ. ಈ ವಿಚಾರದಲ್ಲಿ ನನ್ನದೇ ಆದಂಥ ಒಂದು ಸಾರ್ವಜನಿಕ ಅಭಿಪ್ರಾಯವನ್ನು ನಾನು ವೇದಿಕೆಗಳಲ್ಲಿ ವ್ಯಕ್ತ ಮಾಡಿದ್ದೇನೆ. ತಾವು ಇನ್ನು ಕೇಳುವುದಿದ್ದರೆ ಹತ್ತು ನಿಮಿಷ ಕೇಳುವುದಕ್ಕೆ ನಿಮಗೆ ಅವಕಾಶ ಕೊಡುತ್ತೇನೆ. ಉಪಪ್ರಶ್ನೆಗಳು ಇದ್ದರೆ ಕೇಳಬಹುದು. ನಿಮ್ಮಲ್ಲಿ ಉಪಪ್ರಶ್ನೆಗಳು ಇಲ್ಲದೇ ಹೋದರೆ ನನ್ನ

ಮೇಲೆ ಆಪಾದನೆ ಹೊರಿಸುವುದು ಬೇಡ. ನಾನು ತಾಳ್ಮೆಯಿಂದ ಇದ್ದೇನೆ, ನಗುನಗುತ್ತಾ ಇದ್ದೇನೆ. ತಮಗೆ ಅವಕಾಶ ಕೊಡುತ್ತೇನೆ, ದಯಮಾಡಿ ಕೇಳಿ. ತಾವು ಉಪಪ್ರಶ್ನೆಯನ್ನು ಕೇಳಬಹುದು. I will ask him to reply. ಮಾನ್ಯ ಮುನಿಯಪ್ಪನವರೇ, ತಾವು ಕುಳಿತುಕೊಳ್ಳಿ, ವಾಟಾಳ್ ನಾಗರಾಜ್‌ರವರೇ, ಇನ್ನು ಕೇಳುವುದು ಇದ್ದರೆ ಕೇಳಿ. ನನ್ನ ಆಬ್ಜೆಕ್ಷನ್ ಏನೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಈಗ ಈ 30 ಲಕ್ಷ ರೂಪಾಯಿ ವಸೂಲಿ ನಿಲ್ಲಿಸುವುದಕ್ಕೆ, ಕ್ಯಾಪಿಟೇಷನ್ ಫೀ ನಿಲ್ಲಿಸುವುದಕ್ಕೆ ಸರ್ಕಾರ ತೀವ್ರವಾದ ಕ್ರಮವನ್ನು ಕೈಗೊಳ್ಳತಕ್ಕಂಥ ಕ್ರಮಗಳೇನಾದರೂ ಇದೆಯೇ?

ಡಾ. ಎಂ.ಶಂಕರನಾಯಕ್:- ಮಾನ್ಯ ಅಧ್ಯಕ್ಷರೇ, ಮತ್ತೆ ಉಚ್ಚ ನ್ಯಾಯಾಲಯದ ಮುಂದೆ ಹೋಗಿ ಅವರ ಪರ್ಮಿಷನ್ ತೆಗೆದುಕೊಳ್ಳಬೇಕೇ ಹೊರತು ಇದು ಸರ್ಕಾರದ ಹಿಡಿತದಲ್ಲಿ ಇಲ್ಲ. ಸರ್ವೋಚ್ಚ ನ್ಯಾಯಾಲಯ ಏನು ಆದೇಶವನ್ನು ಕೊಟ್ಟಿದೆ.

ಅಧ್ಯಕ್ಷರು:- ಸುಪ್ರೀಂ ಕೋರ್ಟ್ ಮಾಡಿರುವುದೇ? ಹೈಕೋರ್ಟ್ ಮಾಡಿರುವುದೇ?

ಡಾ. ಎಂ.ಶಂಕರನಾಯಕ್:- ಸುಪ್ರೀಂ ಕೋರ್ಟ್ ಮಾಡಿರುವುದು.

ಅಧ್ಯಕ್ಷರು:- ಇನ್ನೇನಾದರೂ ಕೇಳುತ್ತೀರೋ ನಾಗರಾಜ್‌ರವರೇ

ಶ್ರೀ ವಾಟಾಳ್ ನಾಗರಾಜ್:- ಆಯಿತು.

ಶ್ರೀ ವಿ.ಮುನಿಯಪ್ಪ:- ಮಾನ್ಯ ಅಧ್ಯಕ್ಷರೇ, ಈ ಒಂದು ಮೆಡಿಕಲ್ ಕಾಲೇಜು ವಿಚಾರ ಸರ್ಕಾರದ ಮೆರಿಟ್ ಸೀಟ್‌ನಲ್ಲಿ ಓದುವವರು ಆಗಬಹುದು ಅಥವಾ ಡೊನೇಷನ್ ಸೀಟಿನಲ್ಲಿ ಓದಿರುವವರು ಆಗಿರಬಹುದು. ಇವರುಗಳು ಡಾಕ್ಟರ್‌ಗಳಾದ ಮೇಲೆ ನಮ್ಮ ದೇಶದಲ್ಲಿರುವ ಕುಗ್ರಾಮಗಳಲ್ಲಿ ಎಷ್ಟೋ ಆಸ್ಪತ್ರೆಗಳನ್ನು ಕಟ್ಟಿ ಅಲ್ಲಿ ಡಾಕ್ಟರ್‌ಗಳನ್ನು ಪೋಸ್ಟಿಂಗ್ ಮಾಡಿದರೆ ಹೋಗುವುದಿಲ್ಲ. ಹಣದ ವ್ಯಾಮೋಹದಿಂದ ವಿದೇಶಕ್ಕೆ ಹೋಗುತ್ತಾರೆ. ಆ ರೀತಿ ವಿದೇಶಕ್ಕೆ ಹೋಗುವಂಥ ಡಾಕ್ಟರ್‌ಗಳ ಸಂಖ್ಯೆ ರಾಜ್ಯ ಸರ್ಕಾರದಲ್ಲಿದೆಯಾ ಎಂದು ದಯವಿಟ್ಟು ತಿಳಿಸಬೇಕು.

ಅಧ್ಯಕ್ಷರು:- ಆ ಮಾಹಿತಿ ಎಲ್ಲಾ ಎಲ್ಲಿ ಇರುತ್ತದೆ?

ಶ್ರೀ ಹೆಚ್.ಸಿ.ಮಹದೇವಪ್ಪ:- ಮಾನ್ಯ ಅಧ್ಯಕ್ಷರೇ, ಸುಮಾರು 92 ಜನ ವಿದೇಶಕ್ಕೆ ಹೋಗರುವವರನ್ನು ಗುರುತಿಸಿ, ಕಳೆದ ಶುಕ್ರವಾರ ನಡೆದ ಸಚಿವಸಂಪುಟದಲ್ಲಿ ಸುಮಾರು 41 ವೈದ್ಯರನ್ನು ಸೇವೆಯಿಂದ ನಿವೃತ್ತಿಗೊಳಿಸುವ ತೀರ್ಮಾನ ಕೈಗೊಂಡಿದೆ. ಇದೊಂದು ಐತಿಹಾಸಿಕ ನಿರ್ಧಾರ ಕೂಡ ಆಗಿದೆ.

ಶ್ರೀ ವಿ.ಮುನಿಯಪ್ಪ:- ಬಹಳ ಅಭಿನಂದನೆ. ಅದೇ ರೀತಿಯಲ್ಲಿಯೇ ಎಷ್ಟೋ ಜನರು ಇಲ್ಲಿ ನೌಕರಿಯಲ್ಲಿದ್ದು ರಜದಲ್ಲಿ ಹೋಗಿ ಅಲ್ಲಿ ಕೆಲಸ ಸರಿಹೋಗಲಿಲ್ಲ ಎಂದರೆ

ಮತ್ತೆ ಬರುವ ಪ್ರಸಂಗಗಳು ಕೂಡ ನಮ್ಮಲ್ಲಿವೆ. ಅದನ್ನು ಕೂಡ ಸರ್ಕಾರ ಗಮನಿಸಿದೆಯೇ ಎಂದು ಹೇಳಬೇಕು.

ಅಧ್ಯಕ್ಷರು:- ಅವರ ಗಮನಕ್ಕೆ ಬಂದರೆ ಚರ್ಚೆ ಮಾಡೋಣ ಮುಂದಿನ ಸಲ. He will take action against those people.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಮಾನ್ಯ ಅಧ್ಯಕ್ಷರೇ, ತಾವು ಈಗಾಗಲೇ ಹೇಳಿದ್ದೀರಿ ವಿದೇಶಕ್ಕೆ ಹೋದವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು.

ಶ್ರೀ ಬಿ.ಎಸ್.ಯಡಿಯೂರಪ್ಪ:- ಎಷ್ಟಾದರೂ ಉಪಪ್ರಶ್ನೆ ಕೇಳಿ ಎಂದು ವಾಟಾಳ್ ನಾಗರಾಜ್ ಒಬ್ಬರಿಗೇ ಹೇಳಿದಿರೋ ಈ ಸದನದಲ್ಲಿರುವ ಸದಸ್ಯರಿಗೆಲ್ಲ ಹೇಳಿದಿರೋ?

ಅಧ್ಯಕ್ಷರು:- ವಾಟಾಳ್ ನಾಗರಾಜ್‌ರವರಿಗೆ ಏಕೆ ಹೇಳಿದೆ ಎಂದರೆ ಇದು ಕೋಟ್ಯಾಂತರ ರೂಪಾಯಿ ವ್ಯವಹಾರ ಇರುವ ಕಾಲೇಜುಗಳಿಗೆ ಸಂಬಂಧಿಸಿದ ವಿಚಾರ. ಅವರು ಹೇಳಿದ ಧಾಟಿ ಹೇಗಿತ್ತು ಎಂದರೆ ನಾನು ಸಿಟ್ಟಿಗೆದ್ದು ಉಪಪ್ರಶ್ನೆಗಳಿಗೆ ಅವಕಾಶ ಕೊಡುತ್ತಿಲ್ಲ ಎನ್ನುವ ರೀತಿ ಇತ್ತು, ನಾನು ಆ ರೀತಿಯಾಗಿ ಯಾವ ದೊಡ್ಡ ಮನುಷ್ಯರ ಮುಲಾಜಿನಲ್ಲಿ ಬದುಕತಕ್ಕಂಥ ಮನುಷ್ಯ ನಾನಲ್ಲ. ಅದಕ್ಕೆ ನನ್ನ ನಿಲುಪನ್ನು ಪುನರುಚ್ಚಾರ ಮಾಡಿ ಸ್ಪಷ್ಟಪಡಿಸಬೇಕು ಎನ್ನುವ ದೃಷ್ಟಿಯಿಂದ ಅವರು ಯಾವುದೇ ಉಪಪ್ರಶ್ನೆಗಳನ್ನು ಕೇಳಿದರೂ ಅದಕ್ಕೆ ನಿರಾತಂಕವಾಗಿ ಅವಕಾಶ ಇರಲಿ. ನನ್ನ ನಿಲುವಿನಲ್ಲಿ ಯಾವುದು ಬದಲಾವಣೆ ಇಲ್ಲ ಎಂದು ಸಮಾಜಕ್ಕೆ ಸ್ಪಷ್ಟಪಡಿಸಬೇಕು ಎಂದು ಹೇಳಿದೆ.

ಶ್ರೀ ವಾಟಾಳ್ ನಾಗರಾಜ್:- ನನ್ನದೂ ಸ್ವಲ್ಪ ಹೇಳಬೇಕಾಗಿದೆ.

ಅಧ್ಯಕ್ಷರು:- ಹೇಳಿ.

ಶ್ರೀ ವಾಟಾಳ್ ನಾಗರಾಜ್:- ನಿಮ್ಮನ್ನು ಆ ರೀತಿ ತಿಳಿದುಕೊಂಡು ಹೇಳಲಿಲ್ಲ. ನಾನು ಆ ರೀತಿ ತಿಳಿದುಕೊಳ್ಳಲಿಲ್ಲ. ತಾವು ತಪ್ಪು ತಿಳಿದುಕೊಳ್ಳಬಾರದು.

ಅಧ್ಯಕ್ಷರು:- ನೀವು ತಿಳಿದುಕೊಳ್ಳಲಿಲ್ಲ.

ಶ್ರೀ ವಾಟಾಳ್ ನಾಗರಾಜ್:- ನಿಮ್ಮ ಬಗ್ಗೆ ಅಪಾರವಾದ ಗೌರವ ಇದೆ. ಈ ವಿಚಾರದಲ್ಲಿ ನೀವು ಯಾರನ್ನು ತಡೆಹಿಡಿದು ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದೂ ಹೇಳಿಲ್ಲ. ನೀವ್ಯಾಕೆ ನನ್ನ ಬಗ್ಗೆ ಆ ರೀತಿ ತಿಳಿದುಕೊಳ್ಳುತ್ತೀರಿ?

ಅಧ್ಯಕ್ಷರು:- ನನ್ನ ಬಗ್ಗೆ ಆ ರೀತಿ ಅಭಿಪ್ರಾಯ ಜನರಿಗೆ ಬರಬಾರದು ಎಂದು ನಾನು ಹೇಳಿದೆ.

ಶ್ರೀ ವಾಟಾಳ್ ನಾಗರಾಜ್:- ಏಕೆ ಬರುತ್ತದೆ? ನಿಮ್ಮ ಬಗ್ಗೆ ಬರುವುದಕ್ಕೆ ಸಾಧ್ಯವೇ ಇಲ್ಲ. ಅದೇಕೆ ಬರುತ್ತದೆ ನಿಮ್ಮ ಬಗ್ಗೆ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯಮಂತ್ರಿಗಳು ಹೇಳಿದರು, ವಿದೇಶಕ್ಕೆ ಹೋದಂಥವರ ಮೇಲೆಲ್ಲಾ ಕ್ರಮ ತೆಗೆದುಕೊಳ್ಳುತ್ತೇವೆ ಎಂದು. ಅದೇ ರೀತಿ ವಿದೇಶಕ್ಕೆ ಹೋದಂಥ ಒಬ್ಬ ಡಾಕ್ಟರ್ ಮೇಲೆ ಕ್ರಮ ತೆಗೆದುಕೊಂಡು ಅವರನ್ನು ನಿವೃತ್ತಿ ಮಾಡಿದ ನಂತರ ಮೊನ್ನೆ ಕಂಟ್ರಾಕ್ಟ್ ಬೇಸಿಸ್ ಮೇಲೆ ಅದೇ ಡಾಕ್ಟರನ್ನು ಹತ್ತು ಸಾವಿರ ರೂಪಾಯಿ ಕಾಂಟ್ರಾಕ್ಟ್ ಕೊಟ್ಟು ಜಯದೇವ ಇನ್‌ಸ್ಟಿಟ್ಯೂಟ್‌ನಲ್ಲಿ ಅಪಾಯಿಂಟ್ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಅಧ್ಯಕ್ಷರು:- ಅದನ್ನು ಅವರ ಗಮನಕ್ಕೆ ತನ್ನಿ. He will take action.

ವಿಷಯ:- ನಿರ್ಮಲ ಯೋಜನೆಯಲ್ಲಿ ಶೌಚಾಲಯಗಳ ನಿರ್ಮಾಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 134 (255)

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಿರ್ಮಲ ಕರ್ನಾಟಕ ಯೋಜನೆಯಲ್ಲಿ ಶೌಚಾಲಯ ನಿರ್ಮಾಣಕ್ಕೆ ರಾಜ್ಯದಲ್ಲಿ ತಾಲ್ಲೂಕುವಾರು ಮಂಜೂರು ಮಾಡಿದ ಶೌಚಾಲಯವೆಷ್ಟು? ಅದಕ್ಕಾಗಿ ಸರ್ಕಾರದಿಂದ ಬಿಡುಗಡೆ ಮಾಡಬೇಕಾದ ಹಣ ಎಷ್ಟು? ಈಗೆಷ್ಟು ಬಿಡುಗಡೆಯಾಗಿದೆ?

ಆ) ಶಿಕಾರಿಪುರ ತಾಲ್ಲೂಕಿನಲ್ಲಿ ಎಷ್ಟು ಶೌಚಾಲಯಗಳ ನಿರ್ಮಾಣಕ್ಕೆ ಉದ್ದೇಶಿಸಲಾಗಿದೆ? ಎಷ್ಟು ಹಣವನ್ನು ವೆಚ್ಚ ಮಾಡಲಾಗುವುದು?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-

ಅ) ನಿರ್ಮಲ ಕರ್ನಾಟಕ ಯೋಜನೆಯಲ್ಲಿ ತಾಲ್ಲೂಕುವಾರು ಮಂಜೂರು ಮಾಡಿದ ಶೌಚಾಲಯಗಳ ಸಂಖ್ಯೆಯನ್ನು ಹಾಗೂ ಅದಕ್ಕಾಗಿ ಸರ್ಕಾರದಿಂದ ಬಿಡುಗಡೆ ಮಾಡಬೇಕಾದ ಹಣ ಹಾಗೂ ಈಗ ಬಿಡುಗಡೆ ಮಾಡಿರುವ ಹಣದ ವಿವರಗಳನ್ನು ಅನುಬಂಧ 'ಎ'ನಲ್ಲಿ ಲಗತ್ತಿಸಿದೆ.

ಆ) ಶಿಕಾರಿಪುರ ತಾಲ್ಲೂಕಿನಲ್ಲಿ 4300 ಶೌಚಾಲಯಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ರೂ.67.08 ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಲಾಗುವುದು.